ನಂಬರ್ 78. ತಾರೀಖು 6ನೇ ನೂಹೆ ಮೇ 1884.

ಸಮಸ್ತ ಜನಗಳಿಗೂ ತಿಳಿಯುವಂಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, ಇದರಡಿ ಕಂಡ ಸರಕಾರ ಗ್ರಾಮಗಳ ರೆವಿನ್ಯೂ ಸರ್ವೆ ಜಮಾಬಂದಿಯು, ಇದೇ ತಿಂಗಳ 19ನೇ ತಾರೀಖಿನಲ್ಲಿ ಯಾ ಆಮೇಲೆ ಹಾರಂಭಿಸಲ್ಪಡುತ್ತೆ.

ಚನ್ನರಾಯಪಟ್ಟಣ ಬಾಬತು ಗ್ರಾಮಗಳು	390	ಅತ್ತಿಕುಪ್ಪೆ ಬಾಬತು ಗ್ರಾಮಗಳು ..	2
ಅರಕೀಕೆರೆ ಬಾಬತು ಗ್ರಾಮಗಳು ..	18		

ಜೆ. ಪಿ. ಗ್ಯಾಂಟ್,
ಸೂ॥ ರೆ॥ ಸರ್ವೆ ಮತ್ತು ಸೆಟಲ್‌ಮೆಂಟ್, ಮೈಸೂರ್.

ಫಿನಾನ್ಷಿಯಲ್ ಇಲಾಖಾ.

1882ನೇ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಪರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ಹೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಷ್ಟೇನ್‌ಮೆಂಟ್ ಯಾನೇ ಪರಾ ಬಗ್ಗೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಷ್ಟೇನ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಲೋಕಲ್ ಫಾಜಿನ ನವಕರರಿಂದ ಪಾವತೀ ಮಾಡಲ್ಪಡುವ ಕಂದಾಯ.

ಡಿಸ್ಟ್ರಿಕ್ಟ ಜಾತ ಡೆಪ್ಯುಟಿ ಕಮ್ಮಿಷನರ್‌ಗಳಿಗೆ—ಸರ್ಕ್ಯುಲರ್ ನಂ. 1586, ತಾರಿಖು 1ನೇ ಮೇ 1884.

ಈ ಆಫೀಸು 1884ನೇ ಇಸವಿ ಫಿಬ್ರವರೀ 29ನೇ ಮಕ್ಕಂ 1576ನೇ ನಂಬರ್ ಸರಕ್ಯುಲರ್ ಅನುಸರಿಸಿ, ಅಮಲ್‌ದಾರುಗಳು ಕೇಳಿ ಕೊಳ್ಳಲ್ಪಡುವದೇನಂದರೆ, ಕಂದಾಯದ ಬಾಬತು ಮೊಬಲಗು ಜಾಸ್ತಿ ಆದ ವಡನೇ ಪಾವತೀ ಮಾಡಿದ ಇಸಮಿನ ಹೆಸರು ದೇಖೀಲ್ ಇತರ ಅವಶ್ಯಕವಾದ ತಪಶೀಲ್ ಕಂಡ ವಂದು ಅಡ್ವೈಸನ್ನು ಸಂಬಂಧಪಟ್ಟ ತಾಲ್ಲೂಕು ಅಮಲ್‌ದಾರ್‌ಗೆ ಕಳುಹಿಸಿಕೊಡತಕ್ಕದ್ದು.

ಹೆಚ್. ಹಡಿರ್ಸ,
ಕಾಂಪ್ಟ್ರೋಲರ್.

ನಂದೀದುರ್ಗ ಡಿವೀರ್ಜ.

ನಂದೀದುರ್ಗ ಡಿವೀರ್ಜ ಡಿಸ್ಟ್ರಿಕ್ಟ ಜಡ್ಜ್‌ರಯವರ ಕೋರ್ಟಿನಲ್ಲಿ.

ಕದರಂಣನ ಮಗ ದೊಡ್ಡನರಸುಪ್ಪನ ವಿಷಯದಲ್ಲಿ—

1884ನೇ ಇಸವಿ ದಿವಾಳಿ ವ್ಯಾಜ್ಯದ ನಂಬರಿ 78.

ಹುಕ್ಕುಂ.

ಮೇಲ್ಕಂಡ ದೊಡ್ಡನರಸುಪ್ಪನು ಖಿಲಾಸೇಯಾಗಬೇಕಂದು ಕೋರಿ ಬರಡುಕೊಂಡ ಅರ್ಜೀಯು ಟಿ. ಆರ್. ಯೆ. ತಂಬುಚಟ್ಟಿಯಾರ್, ಡಿಸ್ಟ್ರಿಕ್ಟ ಜಡ್ಜ್‌ರಯವರ ರೂಬರೂ ಅರ್ಜೀದಾರನ ಪರವಾಗಿ ಯಿವನ ಸವಾಲ್ಪವುದಲ್ಲಿಯೂ ಮತ್ತು ಐರ್ಜ ಅರ್ಜೀದಾರನ ಲೇಣೀದಾರರಾದ ವೆಂಕಟಸಾಮಿ ವಗೈರೇರ ಗೈರ್ ಹಾಜರ್, ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದ್ಮಾಡಲ್ಪಡುವ ಲೇಣೇದಾರ್ರಿಗೆ ಈ ದರ್ಖಾಸ್ತ್ಕೀ ನೋಟೀಸ್ ಜಾರೀಯಾಗಿದ್ದುಗ್ಯೂ ತಾವೇ ಖುದ್ದಾಗಿಯೂಗಲಿ ಲಾಯರ್ ಮೂಲಕವಾಗಿ ಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ– 1ನೇ ವೆಂಕಟಸ್ವಾಮಿ, 2ನೇ ದೊಡ್ಡ ವೀರಭದ್ರಂಣ, 3ನೇ ಚಿಕ್ಕ ವೀರಭದ್ರಂಣ, 4ನೇ ಭೈರಂಣ, 5ನೇ ನಾರಣಯ್ಯರ್, 6ನೇ ಅದಾಲತ್ ಬ್ಯಾಂಕ್, 7ನೇ ಪುಟ್ಟಂಣ, 8ನೇ ಸುಬ್ರಹ್ಮಣ್ಯೇಶ್ವರ ಸ್ವಾಮಿ ಬ್ಯಾಂಕ್, 9ನೇ ಗಿಡ್ಡಂಣ, 10ನೇ ಲಕ್ಷ್ಮೀನಾರಣಪ್ಪ.

ಸದರೀ ದೊಡ್ಡ ನರಸಿಹ್ಮನು ದಿವಾಳೀಯಾದವನೆಂದನ್ನು ಸಿವಿಲ್ ಪ್ರೊಸೀಡ್ಯೂರ್ ಕೋಡಿನ 20ನೇ ಅಧ್ಯಾಯದಲ್ಲಿನ ನಿರೂಪಣೆಗಳ ಫಲವನ್ನ ಹೊಂದುವದಕ್ಕೆ ಹಕ್ಕುದಾರನಾಗಿರುತ್ತಾನೆಂದು ಇದರಿಂದ ತೀರ್ಮಾನಿಸಲ್ಪಟ್ಟಿರುತ್ತದೆ. ಈ ಕೋರ್ಟು ಕರಸ್ತೇದಾರು ಇನ್ನು ಮುಂದೆ ನಮೂದಾದಂತೆ ಐಜ್ಞ ದಿವಾಳೀಯಾದವನ ಜಿಂದಗಿಗೆ ರಿಸೀವರಾಗಿ ಮೊಕರರ್ರಾಮಲ್ಪಡತಕ್ಕದೆಂದನ್ನು ಸದರೀ ರಿಸೀವರಾದವನು ಸದರಿ ದಿವಾಳೀಯಾದವನ ಜಿಂದಗಿಗೆ ಜವಾಬೆ ಮಾಡತಕ್ಕ ಬಗ್ಯೂ ನಿಗೇವಾನೀ ಮಾಡತಕ್ಕ ಬಗ್ಯೂ ಸಹ ತನ್ನ ರಿಸೀವರ ಕೆಲಸಗಳಿಗೆ ಉದ್ಯುಕ್ತ ಪಡತಕ್ಕದ್ದೆಂದನ್ನು ಮತ್ತು ಸದರೀ ರಿಸೀವರನು ತಾನು ನಡಸಿದ ಕೆಲಸಗಳ ಪ್ರತಿ ಫಲಕ್ಕಾಗಿ ದಿವಾಳೀಯಾದವನ ಲೇಣೇದಾರರಿಗೆ ಬಟವಾಡೆ ಮಾಡಿದ ಮೊಬಲಗಿನ ಬಾಕೀ ಹಣದಲ್ಲಿ ದರ ಶೇಕಡಾ 5 ರೂಪಾಯಿ ಮೇರೆ ಕಮ್ಮಿಷ್ಯ ನಿಲ್ಲಿಸಿಕೊಳ್ಳತಕ್ಕದ್ದೆಂದನ್ನು ಸಹ ಹುಕ್ಕುಂ ಮಾಡಲ್ಪಟ್ಟಿ ಇಧೆ.

ಸ್ಯ 1884ನೇ ಇಸವಿ ಏಪ್ರೆಲ್ 7ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟ. ಆರ್. ಏ. ತಂಬುಚೆಟ್ಟಿ,
ಡಿಸ್ಟ್ರಿಕ್ಟ್ ಜಡ್ಜ್.

ಬೆಂಗಳೂರು ಡಿಸ್ಟ್ರಿಕ್ಟ್.
ತಾರೀಖು 3ನೇ ಮೇ 1884.

ಇದರಿಂದ ತಿಳಿಯಪಡಿಸುವದೇನಂದರೆ, ಇದರ ಕೆಳಗೆ ನಮೂದ್ಮಾಡಿರುವ ಸಬ್ ರಿಜಿಸ್ಟ್ರೀ ಆಫೀಸುಗಳಲ್ಲಿ ಜೇವಾರಸಾಗಿ ಇರತಕ್ಕ ಇದರ ಕೆಳಗೆ ವಿವರಿಸೋಣಾದ ದಸ್ತೈವಜನ್ನ ಹಾಜರ್ಮಾಡಿದವರೆ ಯಾಗಲಿ ಅಥವಾ ವಾಪಸುಪಡಿಯಲಿಕ್ಕೆ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುಖ್ತಾಲೀಕ ಯಾ ಹಕ್ಕುದಾರ್ರಿಯಾಗಲಿ ಈ ನೋಟೀಸ್ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಸದರೀ ಆಫೀಸು ರೂಬರೂ ಹಾಜರಾಗಿ ವಾಪಸ್ ತೆಗದುಕ್ಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರು ರಿಜಿಸ್ಟ್ರೇಷ್ಯ ಆಕ್ಟು 85ನೇ ಸೆಕ್ಷ್ಯ ಅನುಸರಿಸಿ ನಾಶಪಡಿಸಲ್ಪಡುವವು.

ನಂಬರು.	ಸಬ್ ರಿಜಿಸ್ಟ್ರೀ ಆಫೀಸ್.	ಬರಚುಕೊಟ್ಟವನ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವನ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಿಯ ತಾರೀಖು	ದಸ್ತೈವೇಜಿನ ಸ್ವಭಾವ ಮತ್ತು ಕಿಮ್ಮತ್ತು.
72 81—82	ಕ್ಲೋಸ್‌ಪೇಟೆ	1 ಕ್ಲೋಸ್‌ಪೇಟೆಯಲ್ಲಿ ಇರುವ ನಾಮದೇವ ಭಗವಂತಜೋಜಿಮಗ ವೆಂಕೋಜಿ 2 ಕ್ಲೋಸ್‌ಪೇಟೆ ಪೂಸಸ್ಥನಾದ ನಾಮದೇವ್ ತಿಮ್ಮೋಜಿ ಮಗ ರಾಜೋಜಿ	ಕ್ಲೋಸ್‌ಪೇಟೆಯಲ್ಲಿ ಇರುವ ರಡ್ಡಿ ವೆಂಕಟರಮಣಯ್ಯನ ಮಗ ಬಸಪ್ಪ	9—1—82	9—1—82	ಕ್ಲೋಸ್‌ಪೇಟೆ ಕಸಬಾದಲ್ಲಿ ಇರುವ 345ನೇ ನಂಬರ್ ಹೆಂಚಿನ ಮನೆಯನ್ನ 100 ರೂಪಾಯಿಗೆ ಶುದ್ಧ ಭೋಗ್ಯಮಾಡಿ ಇರುವದಾಗಿ ಪತ್ರ.
1185 81—82	ಬೆಂಗಳೂರು	ಬೆಂಗಳೂರು ಗೌಡನಪೇಟೆಯಲ್ಲಿ ಇರುವ ಅಂಗಡಿ ಹನುಮಯ್ಯನ ಮಗನ ಸಂಜೀವಯ್ಯ	ಬೆಂಗಳೂರು ಗೌಡನಪೇಟೆಯಲ್ಲಿ ಇರುವ ಚಿಕಪಿನಪ್ಪನ ಮಗ ಚಿಕ್ಕ ಹೊಚ್ಚಪ್ಪ	6—12—81	6—12—81	ಬೆಂಗಳೂರು ಗೌಡನಪೇಟೆಯಲ್ಲಿ ಬೋರಹು 24ನೇ ನಂಬರು ಮನೆಯನ್ನು 30 ರೂಪಾಯಿಗೆ ಕ್ರಯ ಮಾಡಿ ಇರುವಂತೆ.

ಕೃಷ್ಣಯ್ಯಂಗಾರ್,
ಫಾರ್ ರಿಜಿಸ್ಟ್ರಾರ್.